## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 87 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 11.8.2025 |
| ಉತ್ತರಿಸುವ ಸಚಿವರು | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕ್ರಿಟಿಕಲ್ ಕೇರ್ ಹಬ್‌ಗಳನ್ನು ಸ್ಥಾಪಿಸಲು; ಆಸ್ಪತ್ರೆಗಳನ್ನು ನವೀಕರಿಸಲು ಮತ್ತು ರಕ್ತ ಸಂಗ್ರಹಣಾ ಘಟಕಗಳಿಗೆ ಉಪಕರಣಗಳನ್ನು ಖರೀದಿಸಲು ಮತ್ತು ಇನ್ನೂ ಹಲವಾರು ಕಾರ್ಯಗಳಿಗೆ ಸರ್ಕಾರವು ಪ್ರತಿ ವರ್ಷ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುತ್ತಿದ್ದರೂ, ಇನ್ನೂ ಕೆಲವೊಂದು ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೇ ರೋಗಿಗಳು ಪರದಾಡುತ್ತಿರುವ ಮಾಹಿತಿಯು ನಿಜವೇ; | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳಲ್ಲಿ 15 ಕ್ರಿಟಿಕಲ್ ಕೇರ್ ಬ್ಲಾಕ್‌ಗಳು ಮಂಜೂರಾಗಿರುತ್ತವೆ. ಸದರಿ ಕ್ರಿಟಿಕಲ್ ಕೇರ್ ಬ್ಲಾಕ್‌ಗಳ ಸಿವಿಲ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br><br>ಜಿಲ್ಲಾ ಆಸ್ಪತ್ರೆ ಕೋಲಾರ, ತುಮಕೂರು, ವಿಜಯಪುರ, ಬಾಗಲಕೋಟೆ ಮತ್ತು ಉಡುಪಿ ಇಲ್ಲಿನ 5 ಕ್ರಿಟಿಕಲ್ ಕೇರ್ ಬ್ಲಾಕ್‌ಗಳಲ್ಲಿ ಸಿವಿಲ್ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಸದರಿ ಕ್ರಿಟಿಕಲ್ ಕೇರ್ ಬ್ಲಾಕ್‌ಗಳಿಗೆ ಅವಶ್ಯವಿರುವ ಉಪಕರಣಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>**ಕ್ರಿಟಿಕಲ್ ಕೇರ್ ಆಸ್ಪತ್ರೆ ಬ್ಲಾಕ್‌ಗಳು (CCB s)**<br>ತೀವ್ರ ಮತ್ತು ತುರ್ತು ಪ್ರಕರಣಗಳ ನಿರ್ವಹಣೆಯನ್ನು ಸುಧಾರಿಸಲು, Covid-19 ತರಹದ ಮಹಾಮಾರಿ ಸಂಬಂಧಿತ ಪರಿಸ್ಥಿತಿಗಳನ್ನು ಒಳಗೊಂಡಂತೆ, ಕ್ರಿಟಿಕಲ್ ಕೇರ್ ಬ್ಲಾಕ್‌ಗಳು ಆರೋಗ್ಯ ವ್ಯವಸ್ಥೆಯ ತಯಾರಿ ಮತ್ತು ಸೋಂಕಿತ ಮತ್ತು ತೀವ್ರ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ಜಿಲ್ಲಾ ಸಾಮರ್ಥ್ಯವನ್ನು ವೃದ್ಧಿಸುವ ಉದ್ದೇಶ ಹೊಂದಿವೆ. ಐದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಜಿಲ್ಲೆಗಳಲ್ಲಿ CCB ಗಳನ್ನು ಅನುಮೋದಿಸಲಾಗಿದೆ.<br><br>ಸರ್ಕಾರದ ವತಿಯಿಂದ ಬಡವರಿಗೆ ಮತ್ತು ರೋಗಿಗಳ ಕ್ಷೇಮಾಭಿವೃದ್ಧಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.<br><br>ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಅಭಿಯಾನದಡಿಯಲ್ಲಿ(PM-ABHIM):<br>• 100 ಮತ್ತು 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಬ್ಲಾಕ್‌ಗಳ ನಿರ್ಮಾಣಕ್ಕೆ ಕೇಂದ್ರ ಹಾಗು ರಾಜ್ಯ ಸರ್ಕಾರದಿಂದ 60:40 ಅನುದಾನ ಹಂಚಿಕೆ ಮಾಡಲಾಗಿದೆ<br>• ಉದ್ದೇಶ: ಜಿಲ್ಲಾ ಆಸ್ಪತ್ರೆಗಳಲ್ಲಿ ತೀವ್ರ ಚಿಕಿತ್ಸೆ ಸೌಲಭ್ಯವನ್ನು ಬಲಪಡಿಸುವುದು<br><br>**ಕ್ರಿಟಿಕಲ್ ಕೇರ್ ಬ್ಲಾಕ್‌ನಲ್ಲಿ ಇರುವ ಸೌಲಭ್ಯಗಳು ಈ ಕೆಳಕಂಡಂತಿವೆ.**<br>• ತುರ್ತು ವಿಭಾಗ, ಐಸಿಯು, ಪ್ರತ್ಯೇಕ ವಾರ್ಡಗಳು<br>• ಆಮ್ಲಜನಕ ಬೆಂಬಲಿತ ಹಾಸಿಗೆಗಳು<br>• ಶಸ್ತ್ರಚಿಕಿತ್ಸಾ ಘಟಕ, 2 ಲೇಬರ್ ಡೆಲಿವರಿ ರಿಕವರಿ ಕೊಠಡಿಗಳು (LDRs) |

- ನವಜಾತ ಶಿಶುಗಳ ಆರೈಕೆ ಕೇಂದ್ರ

ಪೋಷಕ ಸೇವೆಗಳು: ಈ ಕೆಳಕಂಡಂತಿವೆ

- ಇಮೇಜಿಂಗ್, ಆಹಾರ ಪೂರೈಕೆ, ಯಂತ್ರ ಚಾಲಿತ ಲಾಂಡ್ರಿ

**ಕ್ರಿಟಿಕಲ್ ಕೇರ್ ಬ್ಲಾಕ್‌ಗಳ ಉದ್ದೇಶ:**

- ಜಿಲ್ಲೆಗಳ ಮಟ್ಟದಲ್ಲಿ ಸೋಂಕು ಮತ್ತು ತೀವ್ರ ಕಾಯಿಲೆಗಳ ಚಿಕಿತ್ಸೆಗೆ ಖಚಿತ ಸಾಮರ್ಥ್ಯ ವೃದ್ಧಿಸುವುದು
- ಅವಶ್ಯಕ ಮೂಲಸೌಕರ್ಯಗಳು, ಅಗ್ನಿ ಸುರಕ್ಷತೆ ಒಳಗೊಂಡಂತೆ ವಿಪತ್ತು ನಿರ್ವಹಣಾ ಮಾನದಂಡಗಳು, ಹಾಗೂ ತುರ್ತು ಪರಿಸ್ಥಿತಿಗಳಲ್ಲಿ ರೋಗಿಗಳ ಸುರಕ್ಷತೆ ಖಚಿತ ಪಡಿಸುವುದು.

**ಒಟ್ಟು ಅನುಮೋದಿತ CCBs:**

- ಒಟ್ಟು 34 CCBs ಕೇಂದ್ರ ಸರ್ಕಾರದಿಂದ ಅನುಮೋದನೆ ಗೊಂಡಿವೆ.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (HFWD) ಅಡಿಯಲ್ಲಿ: 15
- ವೈದ್ಯಕೀಯ ಶಿಕ್ಷಣ ಇಲಾಖೆ (DME) ಅಡಿಯಲ್ಲಿ: 19

ಅನುಮೋದನೆಯಾದ ಅನುದಾನದ ವಿವರ:

- **100 ಹಾಸಿಗೆ ಬ್ಲಾಕ್‌ಗಳು (3):**
  - ಬಂಡವಾಳ ವೆಚ್ಚ: Capital cost -₹44.5 ಕೋಟಿ
  - ವಾರ್ಷಿಕ ಪೂರೈಕೆ ವೆಚ್ಚ: ₹7.912 ಕೋಟಿ
- **50 ಹಾಸಿಗೆ ಬ್ಲಾಕ್‌ಗಳು – ಜಿಲ್ಲಾ ಆಸ್ಪತ್ರೆಗಳಲ್ಲಿ (12):**
- ಬಂಡವಾಳ ವೆಚ್ಚ: ₹23.75 ಕೋಟಿ
- ವಾರ್ಷಿಕ ಪೂರೈಕೆ ವೆಚ್ಚ: ₹4.592 ಕೋಟಿ

- **50 ಹಾಸಿಗೆ ಬ್ಲಾಕ್‌ಗಳು – ವೈದ್ಯಕೀಯ ಕಾಲೇಜುಗಳಲ್ಲಿ (19):**
  - ಬಂಡವಾಳ ವೆಚ್ಚ: ₹23.75 ಕೋಟಿ
  - ವಾರ್ಷಿಕವೆಚ್ಚಅನುಮೋದನೆಯಾಗಿರುವುದಿಲ್ಲ.

ಆರ್ಥಿಕ ಅನುಮೋದನೆ:
ಹಣಕಾಸು ವರ್ಷ 2021–22 ರಿಂದ 2025–26ರವರೆಗೆ ಒಟ್ಟು ₹ 92657.52 ಲಕ್ಷ ಅನುಮೋದನೆಯಾಗಿರುತ್ತದೆ.

-

- ₹91223 ಲಕ್ಷ – ಮೂಲಧನ ವೆಚ್ಚ
- ₹1434.52 ಲಕ್ಷ – ಪೂರೈಕೆ ವೆಚ್ಚ.

ಆಸ್ಪತ್ರೆಯ ನವೀಕರಣ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕಕ್ಕೆ ಸಂಬಂಧಿಸಿದಂತೆ 2024-25ನೇ ಸಾಲಿಗೆಆಸ್ಪತ್ರೆ ನವೀಕರಣ ಹಾಗೂದುರಸ್ತಿಗಳಿಗೆಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಒದಗಿಸಲಾದ ಅನುದಾನ ಮತ್ತು ವೆಚ್ಚದ ವಿವರಗಳು ಕೆಳಗಿನಂತಿದೆ.

| | | 2024-25 (ರೂ.ಲಕ್ಷಗಳಲ್ಲಿ) | | | |
|---|---|---|---|---|---|
| ಕ್ರ ಸಂ | ಲೆಕ್ಕಶೀರ್ಷಿಕೆ | ಕಾಮಗಾರಿಗಳ ಸಂಖ್ಯೆ | ಅನುದಾನ ಮೊತ್ತ | ಬಿಡುಗಡೆ | ವೆಚ್ಚ |
| 1 | 4210-01-110-1-01-133 (ಎಸ್.ಡಿ.ಪಿ) | 296 | 11200.00 | 11200.00 | 11200.00 |
| 2 | 4210-01-110-1-01-386 (ಪ್ರಧಾನ ಕಾಮಗಾರಿಗಳು) | 480 | 39157.57 | 39156.99 | 39145.74 |
| 3 | 4210-01-110-1-01-422 (ಎಸ್.ಸಿಎಸ್.ಪಿ) | 101 | 4145.30 | 4145.30 | 4145.30 |
| 4 | 4210-01-110-1-01-423 (ಟಿ.ಎಸ್.ಪಿ) | 36 | 1612.12 | 1612.00 | 1612.00 |
| 5 | 2210-01-110-1-21-200 (ಕಟ್ಟಡ ನಿರ್ವಹಣೆ) | 141 | 4688.20 | 4688.00 | 3298.08 |
| 6 | 2210-01-110-1-21-422 (ಎಸ್.ಸಿ.ಎಸ್.ಪಿ) | 49 | 937.50 | 234.00 | 231.83 |
| 7 | 2210-01-110-1-21-423 (ಟಿ.ಎಸ್.ಪಿ) | 19 | 374.30 | 93.99 | 93.99 |
| 8 | 2210-01-110-4-06-422 (ಎಸ್.ಸಿ.ಎಸ್.ಪಿ ಮಹಾತ್ವಾಕಾಂಕ್ಷಿತಾಲ್ಲೂಕು) | 422 | 1050.00 | 523.99 | 523.99 |
| 9 | 2210-01-110-4-06-423(ಟಿ.ಎಸ್.ಪಿ ಮಹಾತ್ವಾಕಾಂಕ್ಷಿತಾಲ್ಲೂಕು) | 9 | 450.00 | 365.46 | 365.46 |
| 10 | 2210-01-110-4-06-059 & 200 (ಮಹಾತ್ವಾಕಾಂಕ್ಷಿತಾಲಂಲೂಕು) | 201 | 3500.00 | 3500.00 | 3500.00 |
| 11 | 4210-80-800-0-01-423(Unspent) | 5 | 84.35 | 84.35 | 84.35 |
| | ಒಟ್ಟು | 1759 | 67199.34 | 65604.08 | 64200.74 |

ಮೇಲಿನಂತೆ 2024-25ನೇ ಸಾಲಿನಲ್ಲಿಒಟ್ಟಾರೆಯಾಗಿ 1759 ಕಾಮಗಾರಿಗಳಿಗೆ ಬಿಡುಗಡೆಯಾದ ರೂ.65604.08 ಲಕ್ಷಗಳಲ್ಲಿ ರೂ.64200.74 ಲಕ್ಷಗಳನುವೆಚ್ಚ ಭರಿಸಿ ವಿವಿಧ ಆಸ್ಪತ್ರೆಗಳಾದ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಮಟ್ಟದ ಆಸ್ಪತ್ರೆ, ಸಮುದಾಯಆರೋಗ್ಯ ಕೇಂದ್ರ

- ₹91223 ಲಕ್ಷ – ಮೂಲಧನ ವೆಚ್ಚ
- ₹1434.52 ಲಕ್ಷ – ಪೂರೈಕೆ ವೆಚ್ಚ.

ಆಸ್ಪತ್ರೆಯ ನವೀಕರಣ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕಕ್ಕೆ ಸಂಬಂಧಿಸಿದಂತೆ 2024-25ನೇ ಸಾಲಿಗೆಆಸ್ಪತ್ರೆ ನವೀಕರಣ ಹಾಗೂದುರಸ್ತಿಗಳಿಗೆಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಒದಗಿಸಲಾದ ಅನುದಾನ ಮತ್ತು ವೆಚ್ಚದ ವಿವರಗಳು ಕೆಳಗಿನಂತಿದೆ.

| | | | | 2024-25 (ರೂ.ಲಕ್ಷಗಳಲ್ಲಿ) | |
|---|---|---|---|---|---|
| ಕ್ರ ಸಂ | ಲೆಕ್ಕಶೀರ್ಷಿಕೆ | ಕಾಮಗರಿಗಳ ಸಂಖ್ಯೆ | ಅನುದಾನ ಮೊತ್ತ | ಬಿಡುಗಡೆ | ವೆಚ್ಚ |
| 1 | 4210-01-110-1-01-133 (ಎಸ್.ಡಿ.ಪಿ) | 296 | 11200.00 | 11200.00 | 11200.00 |
| 2 | 4210-01-110-1-01-386 (ಪ್ರಧಾನ ಕಾಮಗಾರಿಗಳು) | 480 | 39157.57 | 39156.99 | 39145.74 |
| 3 | 4210-01-110-1-01-422 (ಎಸ್.ಸಿಎಸ್.ಪಿ) | 101 | 4145.30 | 4145.30 | 4145.30 |
| 4 | 4210-01-110-1-01-423 (ಟಿ.ಎಸ್.ಪಿ) | 36 | 1612.12 | 1612.00 | 1612.00 |
| 5 | 2210-01-110-1-21-200 (ಕಟ್ಟಡ ನಿರ್ವಹಣೆ) | 141 | 4688.20 | 4688.00 | 3298.08 |
| 6 | 2210-01-110-1-21-422 (ಎಸ್.ಸಿ.ಎಸ್.ಪಿ) | 49 | 937.50 | 234.00 | 231.83 |
| 7 | 2210-01-110-1-21-423 (ಟಿ.ಎಸ್.ಪಿ) | 19 | 374.30 | 93.99 | 93.99 |
| 8 | 2210-01-110-4-06-422 (ಎಸ್.ಸಿ.ಎಸ್.ಪಿ ಮಹಾತ್ವಾಕಾಂಕ್ಷಿತಾಲ್ಲೂಕು) | 422 | 1050.00 | 523.99 | 523.99 |
| 9 | 2210-01-110-4-06-423(ಟಿ.ಎಸ್.ಪಿ ಮಹಾತ್ವಾಕಾಂಕ್ಷಿತಾಲ್ಲೂಕು) | 9 | 450.00 | 365.46 | 365.46 |
| 10 | 2210-01-110-4-06-059 & 200 (ಮಹಾತ್ವಾಕಾಂಕ್ಷಿತಾಲ ಲೂಕು) | 201 | 3500.00 | 3500.00 | 3500.00 |
| 11 | 4210-80-800-0-01-423(Unspent) | 5 | 84.35 | 84.35 | 84.35 |
| | ಒಟ್ಟು | 1759 | 67199.34 | 65604.08 | 64200.74 |

ಮೇಲಿನಂತೆ 2024-25ನೇ ಸಾಲಿನಲ್ಲಿಒಟ್ಟಾರೆಯಾಗಿ 1759 ಕಾಮಗಾರಿಗಳಿಗೆ ಬಿಡುಗಡೆಯಾದ ರೂ.65604.08 ಲಕ್ಷಗಳಲ್ಲಿ ರೂ.64200.74 ಲಕ್ಷಗಳನ್ನುವೆಚ್ಚ ಭರಿಸಿ ವಿವಿಧ ಆಸ್ಪತ್ರೆಗಳಾದ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಮಟ್ಟದ ಆಸ್ಪತ್ರೆ, ಸಮುದಾಯಆರೋಗ್ಯ ಕೇಂದ್ರ

?

ಕಲ್ಯಾಣ ಇಲಾಖೆಯಲ್ಲಿನ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿಯಿರುವ ಈ ಕೆಳಕಂಡ ವಿವಿಧ ವೃಂದದ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ. ಸಂ | ಹುದ್ದೆ | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಸೈಕಾಲಜಿಸ್ಟ್ | 3 |
| 2 | ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್ | 1 |
| 3 | ಮೈಕ್ರೋಬಯಾಲಜಿಸ್ಟ್* | 6 |
| 4 | ಸಹಾಯಕ ಎಂಟಮಾಲಜಿಸ್ಟ್ | 1 |
| 5 | ಫಿಜಿಯೋಥೆರಪಿಸ್ಟ್ | 5 |
| 6 | ಡೆಂಟಲ್ ಮೆಕ್ಯಾನಿಕ್ | 3 |
| 7 | ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 54 |
| 8 | ನೇತ್ರಾಧಿಕಾರಿ | 15 |
| 9 | ಫಾರ್ಮಸಿ ಅಧಿಕಾರಿ | 98 |
| 10 | ಇ.ಸಿ.ಜಿ. ತಂತ್ರಜ್ಞ | 5 |
| 11 | ಡಯಾಲಿಸಿಸ್ ತಂತ್ರಜ್ಞ | 2 |
| 12 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 126 |
| 13 | ಎಲೆಕ್ಟ್ರೀಷಿಯನ್ | 1 |
| | ಒಟ್ಟು | 320 |

ದಿನಾಂಕ:25-07-2025 ರಂದು 10 ವಿವಿಧ ವೃಂದದ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಗಳನ್ನು ಪ್ರಚುರಪಡಿಸಲಾಗಿದೆ.

ಕಲ್ಯಾಣ ಕರ್ನಾಟಕ ವೃಂದದ ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್-01 ಹುದ್ದೆ ಹಾಗೂ ಸಹಾಯಕ ಕೀಟ ಶಾಸ್ತ್ರಜ್ಞರು-01 ಹುದ್ದೆಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ: 02-08-2025 ರಂದು ಅಭ್ಯರ್ಥಿಗಳ ಮಾಹಿತಿಗಾಗಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಿ, ಬಾಧಿತ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

* ಮೈಕ್ರೋಬಯಾಲಜಿಸ್ಟ್ ಹುದ್ದೆಯ ವಿದ್ಯಾರ್ಹತೆಯನ್ನು ಪ್ರಶ್ನಿಸಿ ಶ್ರೀ ಕೆಲ್ವಿನ್ ದಿವಾಕರ್ ಇವರು ಘನ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ: 17359/2022 ಪ್ರಕರಣ ದಾಖಲಿಸಿದ್ದು, ಘನ ನ್ಯಾಯಾಲಯವು ಅಂತಿಮ ಆದೇಶದವರೆಗೆ ಆಯ್ಕೆಪಟ್ಟಿ ಪ್ರಕಟಿಸದಂತೆ ಆದೇಶಿಸಿರುವುದರಿಂದ ಆಯ್ಕೆ ಪಟ್ಟಿಯನ್ನು ಪ್ರಕಟಿಸಿರುವುದಿಲ್ಲ.

2. ಅಧಿಸೂಚನೆ: ಹೆಚ್‌ಎಫ್‌ಡಬ್ಲ್ಯು709 ಹೆಚ್‌ಎಸ್‌ಎಂ 2017, ದಿನಾಂಕ: 17.05.2022ರನ್ವಯ ಇಲಾಖೆಯಲ್ಲಿ ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ ಈ ಕೆಳಕಂಡ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/ಆರ್‌ಪಿಸಿ/15/2022-23, ದಿನಾಂಕ: 02.09.2022ರಲ್ಲಿ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ | ಹುದ್ದೆ | ಅಧಿಸೂಚಿಸಿರುವ ಹು |
|---|---|---|

| ಸಂ. | ಉಳಿಕೆ ಮೂಲ ವೃಂದ | ದ್ದೆಗಳ ಸಂಖ್ಯೆ |
|---|---|---|
| 1 | ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 150 |
| 2 | ಫಾರ್ಮಸಿ ಅಧಿಕಾರಿ | 400 |
| 3 | ಕಿರಿಯ ವೈದ್ಯಕೀಯ ವಿಕಿರಣ ಶಾಸ್ತ್ರ ಚಿತ್ರಣ ಅಧಿಕಾರಿ | 8 |
| | ಒಟ್ಟು | 558 |

ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿ ಹುದ್ದೆಗಳಿಗೆ ದಿನಾಂಕ:02.08.2025 ರಂದು ಅಂತಿಮ ಆಯ್ಕೆ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಕಿರಿಯ ವೈದ್ಯಕೀಯ ವಿಕಿರಣಶಾಸ್ತ್ರ ಚಿತ್ರಣ ಅಧಿಕಾರಿ-08 ಹುದ್ದೆಗಳಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ: 02-08-2025 ರಂದು ಅಭ್ಯರ್ಥಿಗಳ ಮಾಹಿತಿಗಾಗಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಿ, ಬಾದಿತ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

3. ಮುಂದುವರೆದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಸಲ್ಲಿಕೆಯಾಗಿದ್ದ ದಿನಾಂಕ: 1/09/2023ರ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 333 ಹೆಚ್‌ಎಸ್‌ಎಂ 2023, ದಿನಾಂಕ:21.12.2024 ರಲ್ಲಿ 1205 ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಹಾಗೂ 300 ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದನೆ ನೀಡಲಾಗಿದ್ದು, ಸದರಿ 02 ವೃಂದಗಳ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರಡು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

4. ಆದೇಶ ಸಂಖ್ಯೆ: ಆಕುಕ 14 ಹೆಚ್‌ಎಸ್‌ಎಂ 2025, ದಿನಾಂಕ : 21/05/2025ರಲ್ಲಿ ಇಲಾಖೆಯಲ್ಲಿ ಖಾಲಿ ಇರುವ 400 ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹಾಗೂ 400 ಫಾರ್ಮಸಿ ಅಧಿಕಾರಿಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡುವವರೆಗೆ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಭರ್ತಿ ಮಾಡಿಕೊಳ್ಳಲು ಆದೇಶಿಸಲಾಗಿರುತ್ತದೆ.

5. ಆದೇಶ ಸಂಖ್ಯೆ: ಆಕುಕ 178 ಹೆಚ್‌ಎಸ್‌ಎಂ 2025, ದಿನಾಂಕ. 30/06/2025ರಲ್ಲಿ 2025-26 ನೇ ಸಾಲಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ರಾಜ್ಯವಲಯದ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗಳ ಪೈಕಿ ಶೇಕಡ 80 ರಷ್ಟು (80%) ಹುದ್ದೆಗಳನ್ನು ಮಾತ್ರ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಕೆಲವೊಂದು ಷರತ್ತುಗಳಿಗೊಳಪಡಿಸಿ ಅನುಮತಿ ನೀಡಲಾಗಿರುತ್ತದೆ.

ಖಾಲಿಯಿರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗುತ್ತಿದೆ: -

1. ಇಲಾಖೆಯಲ್ಲಿ ಖಾಲಿಯಿರುವ 120 ತಜ್ಞ ವೈದ್ಯರು ಮತ್ತು

100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಟಿಪ್ಪಣಿ ಸಂ:ಆಇ 625 ವೆಚ್ಚ-5/2024, ದಿನಾಂಕ:06.06.2024ರಲ್ಲಿ ಸಹಮತಿ ನೀಡಿದ್ದು, ಅದರಂತೆ ನೇಮಕಾತಿ ಮಾಡಲು ಪರಿಶೀಲಿಸಲಾಗುತ್ತಿದೆ.

2. ಪತ್ರ ಸಂಖ್ಯೆ:ಆಕುಕ 453 ಹೆಚ್‌ಎಸ್‌ಹೆಚ್ 2022, ದಿನಾಂಕ:13.12.2022ರಲ್ಲಿ ರಾಜ್ಯದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿನ ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶಗಳಡಿ ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಹಂತದಲ್ಲಿ ನಿಯಮಾನುಸಾರ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

3. ಆದೇಶ ಸಂಖ್ಯೆ:ಆಕುಕ 1072 ಎಚ್‌ಎಸ್‌ಎಚ್ 2024, ದಿನಾಂಕ:01.01.2025 ರಲ್ಲಿ, ಇಲಾಖೆಯಲ್ಲಿ Hiring on for day basis, Hiring at AB-Ark rates and Hiring for per-case basis ವಿಧಾನದಡಿ ಸೇವೆ ಪಡೆಯಲು ತಜ್ಞ ರ ಸೇವೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

4. ಆದೇಶ ಸಂಖ್ಯೆ:ಆಕುಕ 619 ಹೆಚ್‌ಎಸ್‌ಹೆಚ್ 2022, ದಿ:17.01.2024ರಲ್ಲಿ ಆಕುಕ ಇಲಾಖೆಯಲ್ಲಿ ಖಾಲಿ ಇರುವ 337 ತಜ್ಞ ವೈದ್ಯರನ್ನು ಮತ್ತು 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಕೆಲವು ಷರತ್ತುಗಳಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

5. ಇಲಾಖೆಯ ಮುಖಾಂತರ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ತಜ್ಞತೆ ಹುದ್ದೆಗೆ ನೇಮಿಸಲಾಗುತ್ತಿದೆ.

6. ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ 1 ವರ್ಷದ ಕಡ್ಡಾಯ ಸೇವೆಗಾಗಿ ಬರುವ ವೈದ್ಯ ಅಭ್ಯರ್ಥಿ/ತಜ್ಞ ವೈದ್ಯ ಅಭ್ಯರ್ಥಿಗಳನ್ನು ನೇಮಕ ಮಾಡುವ ಮೂಲಕ ವೈದ್ಯರ/ತಜ್ಞರುಗಳ ಕೊರತೆಯನ್ನು ನೀಗಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಮೇಲ್ಕಂಡಂತೆ ಕ್ರಮಗಳನ್ನು ಕೈಗೊಂಡು ರೋಗಿಗಳಿಗೆ ಅಡಚಣೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದ್ದು, ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.

**ಸಂ: ಆಕುಕ 89ಎಸ್‌ಎಂಎಂ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**